

ಇವರು ನಮ್ಮ ಅಜ್ಜ, ಇವರಿಗೆ ಸರಿಯಾಗಿ ಕಿವಿ ಕೇಳಿಸಲ್ಲ. ಒಂದು ಒಳ್ಳೇ ಹಿಯರಿಂಗ್ ಏಡ್ ತೋರಿಸಿ.'

'ನಿಮಗೆ ಯಾವುದು ತೋರಿಸಲಿ? 200 ರಿಂದ ಹಿಡಿದು ಇಪ್ಪತ್ತು ಸಾವಿರ ರೂಪಾಯಿ ತನಕ ಹಿಯರಿಂಗ್ ಏಡ್ಸ್ ಗಳಿವೆ.'

'200 ರೂಪಾಯಿಗಳದ್ದೇ ತೋರ್‍ಸಿ.' ಮೊಮ್ಮಗ ಯೋಚಿಸಿ ಹೇಳಿದ.

ಅಂಗಡಿ ಮಾಲೀಕ ಉದ್ದನೆಯ ದಾರಕ್ಕೆ ಕಟ್ಟಿದ್ದ ಹಿಯರಿಂಗ್ ಏಡನ್ನು ಅಜ್ಜನ ಕೊರಳಿಗೆ ಹಾಕಿದ.

'ಹಿಯರಿಂಗ್ ಏಡ್ ಕಿವಿಗೆ ಹಾಕಲಾಗುತ್ತದೆ. ಆದ್ರೆ ನೀವು ಅಜ್ಜನ ಕೊರಳಿಗೆ ಯಾಕೆ ಹಾಕಿದಿರಿ!' ಯುವಕ ಕಾರಣ ತಿಳಿಯಲು ಬಯಸಿದ.

'ಇದು ಕೆಲಸ ಮಾಡುವುದಿಲ್ಲ. ಆದರೆ ಇದನ್ನು ಕೊರಳಿಗೆ ಇಳಿಬಿಟ್ಟುಕೊಂಡರೆ ಪ್ರಯೋಜನವಿದೆ. ಇದನ್ನು ನೋಡಿದವರು ಅಜ್ಜಂಗೆ ಕಿವಿ ಕೇಳಿಸಲ್ಲ ಅಂತ ತಿಳಿದುಕೊಳ್ತಾರೆ, ಆಗ ಅವರೇ ಗಟ್ಟಿಯಾಗಿ ಮಾತಾಡ್ತಾರೆ.'

★★★

ಕಣ್ಣಿನ ಆಸ್ಪತ್ರೆಯಲ್ಲಿ ತುಂಬಾ ಹೊತ್ತಿನಿಂದ ರಿಸೆಪ್ಷನ್ ಕೌಂಟರ್ ಬಳಿ ಗದ್ದಲ ಪ್ರಾರಂಭವಾಗಿತ್ತು. ಗದ್ದಲ ಕೇಳಲಾಗದೆ ಆಸ್ಪತ್ರೆಯ ಸರ್ಜನ್ ಹೊರಗೆ ಬಂದರು. ವೃದ್ಧ ಮಹಿಳೆಯೊಬ್ಬರು ಸಿಟ್ಟಿನಿಂದ ಕೂಗಾಡುತ್ತಿದ್ದರು. ಸರ್ಜನ್ ಅವರನ್ನು ಸಮಾಧಾನಪಡಿಸುತ್ತಾ ವಿಚಾರಿಸಿದರು. 'ತಾಯಿ, ಏನ್ ವಿಷಯ? ನನಗೆ ಹೇಳಿ'

'ಯಾರೋ ನನ್ನ ವಿಗ್ ಕದ್ದಿದ್ದಾರೆ.'

'ತಾಯಿ, ನಮ್ಮಲ್ಲಿ ಯಾರೂ ಇಂಥ ನೀಚ ಕೆಲಸ ಮಾಡಲ್ಲ. ನಿಮ್ಮ ವಿಗ್ ಇಲ್ಲೇ ಕಳ್ಳತನವಾಗಿದೆ ಅಂತ ಯಾಕೆ ಅನ್ನಿಸುತ್ತಿದೆ?' ಸರ್ಜನ್ ಪ್ರಶ್ನಿಸಿದರು.

'ಆಪರೇಶನ್‌ಗೆ ಮೊದಲು ನನ್ನ ವಿಗ್‌ನ ಕೂದಲುಗಳು ಎಷ್ಟೊಂದು ಚೆನ್ನಾಗಿದ್ದವು. ಆದ್ರೆ ಈಗ ಇದನ್ನು ಹಾಕಿಕೊಂಡ ಮೇಲೆ ನಾನು ಕಾರ್ಟೂನ್‌ನಂತೆ ಕಾಣಿಸುತ್ತಿದ್ದೇನೆ.' ವೃದ್ಧ ಮಹಿಳೆ ಮತ್ತೂ ರೇಗಿದರು.

ಸರ್ಜನ್ ಶಾಂತಚಿತ್ತದಿಂದ ಹೇಳಿದರು. 'ತಾಯಿ, ನಿಮ್ಮ ಕಣ್ಣಿನ ಪೊರೆಯ ಆಪರೇಶನ್ ಯಶಸ್ವಿಯಾಗಿದೆ, ನೀವೀಗ ಚೆನ್ನಾಗಿ ನೋಡಬಲ್ಲಿರಿ!'

(ಸಂಗ್ರಹ) **ಡಿ.ಎನ್. ಶ್ರೀನಾಥ್, ಶಿವಮೊಗ್ಗ**

---

ಸಮುದ್ರ ಮಥನ




## ಚಿಂತನಾರ್ಹ

ಅಂತರ್ಜಾಲ ಸ್ವತಂತ್ರವೆ?, ವಿಶಾಖ ಎನ್. ಅವರು ಬರೆದ ಮುಖಪುಟ (ಸುಧಾ, ಏ.16) ಲೇಖನ ಚಿಂತನಾರ್ಹವಾಗಿದೆ. ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವಲ್ಲ ಎಂಬುದನ್ನು ಸದಾ ಗಮನದಲ್ಲಿಟ್ಟುಕೊಳ್ಳಬೇಕು. ಇಂಟರ್‌ನೆಟ್ ಮಾಧ್ಯಮದ ಕುರಿತು ಲೇಖಕರು ಚೆನ್ನಾಗಿ ವಿಶ್ಲೇಷಿಸಿದ್ದಾರೆ.

-ಸು.ವಿಜಯಲಕ್ಷ್ಮಿ, ಶಿವಮೊಗ್ಗ

## ಅಭಿವ್ಯಕ್ತಿ ಸ್ವಾತಂತ್ರ್ಯ

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಂತರ್ಜಾಲದಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು ನಿಷೇಧ ಹೇರುವುದು ಅಷ್ಟೊಂದು ಸರಿಯಲ್ಲವಾದರೂ ಕೆಲವೊಂದು ಅಭಿಪ್ರಾಯಗಳು ಗಲಭೆ, ಕೋಮುಸಂಘರ್ಷ, ಜಾತಿ ಸಂಘರ್ಷಕ್ಕೆ ಕಾರಣವಾಗಬಹುದು. ಅಂತರ್ಜಾಲದಲ್ಲಿ ಅಭಿಪ್ರಾಯ ವ್ಯಕ್ತಪಡಿಸುವವರೂ ತಮ್ಮ ಇತಿಮಿತಿ ಅರಿತುಕೊಳ್ಳಬೇಕು. ಅತಿಯಾದ ಸ್ವಾತಂತ್ರ್ಯ ಸ್ವೇಚ್ಛೆಯಾಗುವ ಅಪಾಯವಿದೆ.

-ಹೇಮಾ ಸುಬ್ರಹ್ಮಣ್ಯ, ಹಾಲ್ಮುತ್ತೂರು

## ಅರ್ಥಪೂರ್ಣ ಲೇಖನ

ಆರೋಗ್ಯ ಅಂಕಣದಲ್ಲಿ 'ಅಳು ಆರೋಗ್ಯಕ್ಕೆ ಒಳ್ಳೆಯದೇ?, ಡಾ. ಎಚ್.ಎಸ್. ಮೋಹನ್ ಅವರು ಅಳುವಿನ ಬಗ್ಗೆ ಹಲವು ವಿಚಾರಗಳನ್ನು ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ನಗು ಮತ್ತು ಅಳು ಎರಡೂ ಮನುಷ್ಯರಿಗೆ ದೇವರು ಕರುಣಿಸಿರುವುದು ಆರೋಗ್ಯದಾಯಕವೇ ಆಗಿದೆ.

-ಪಿ.ಎನ್. ಶ್ರೀವತ್ಸ, ಬೆಂಗಳೂರು, ವೈ.ಜಿ. ನರಸಿಂಹನ್, ಶಿವಮೊಗ್ಗ

## ಮೂಲಭೂತ ಸೌಕರ್ಯ ಬೇಕು

'ಬೆಳವಾಡಿಯ ಭವ್ಯ ದೇಗುಲ', ದಿನೇಶ್ ಪಟವರ್ಧನ್ ಬರೆದ ಲೇಖನ ಚೆನ್ನಾಗಿದೆ. ಅದ್ಭುತ ಕಲೆಯ ಸಂಗಮವಾದ ಬೆಳವಾಡಿ ವೀರನಾರಾಯಣ ದೇಗುಲಕ್ಕೆ ಹೋಗುವ ಮಾರ್ಗ ಪ್ರವಾಸಿಗರನ್ನು ಆಕರ್ಷಿಸುತ್ತಿಲ್ಲ. ಮೂಲಭೂತ ಸೌಕರ್ಯದ ಕೊರತೆಯನ್ನು ಅನುಭವಿಸುವ ಈ ಪ್ರವಾಸಿ ತಾಣದ ಬಗ್ಗೆ ಸರ್ಕಾರ ಗಮನಕೊಡಬೇಕಾಗಿದೆ.

-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು, ಎಚ್.ಆರ್.ದೇಸಾಯಿ ರಾಯಚೂರು

## ಶುಭ ವಿದಾಯ

ಕಳೆದ ಒಂದು ದಶಕದಿಂದ ವಿವಿಧ ವಿಷಯಗಳ ಬಗ್ಗೆ ವಿಚಾರ ಲಹರಿಯನ್ನೇ ಹರಿಸಿದ ಲೇಖಕರು ಈ ಬಾರಿ ಬರೆದ 'ಬೀಳ್ಕೊಡುಗೆಯ ಭಾವತುಮುಲ' ಬರಹ ಓದಿ ಹೃದಯ ತುಂಬಿ ಬಂತು. ಅಂಕಣ ಓದುತ್ತಿದ್ದಂತೆ ಲೇಖಕರು ಓದುಗರಿಗೆ ವಿದಾಯ ಹೇಳಿದಂತೆ ಭಾಸವಾಯಿತು.

-ಪಿ.ಎ. ಸುಧೀಂದ್ರ, ಬೆಂಗಳೂರು

## ಅಭಿನಂದನಾರ್ಹರು

'ಬಹುಶ್ರುತ ವಿದುಷಿಗೆ ಯುನೆಸ್ಕೊ ಮನ್ನಣೆ', ಕಲಾವಿದೆ ಉಷಾ ಆರ್.ಕೆ. ಅವರ ಬಗ್ಗೆ ಉಮಾ ಅನಂತ್ ಅವರು ಬರೆದ ಲೇಖನ ಸೊಗಸಾಗಿದೆ. ಸ್ವತಃ ಕಲಾವಿದೆಯಾಗಿದ್ದು, ಬೇರೆ ಕಲಾವಿದರಿಗೆ ಅವಕಾಶ ಸಿಗಲೆಂದು ಕಾರ್ಯಕ್ರಮ ಆಯೋಜನೆ, ಸಂಘಟನೆಯಲ್ಲೇ ತೊಡಗಿದ ವಿದುಷಿ ಉಷಾ ನಿಜಕ್ಕೂ ಅಭಿನಂದನೆಗೆ ಅರ್ಹರು.

-ಎಚ್. ಆನಂದಕುಮಾರ್, ಚಿತ್ರದುರ್ಗ

## ವೈಶಿಷ್ಟ್ಯಪೂರ್ಣ

ಡಾ. ವಿನೋದ ಛೆಬ್ಬಿ ಅವರ 'ಸುಖೀ ದಾಂಪತ್ಯ' ಬರಹಗಳು ಅತ್ಯಂತ ವೈಶಿಷ್ಟ್ಯಪೂರ್ಣವಾಗಿರುತ್ತವೆ. ಕವಿ ದುಂಡಿರಾಜ್ ಅವರು ಹೇಳಿದಂತೆ 'ನೀರ ಸಾಗರ ದಾಟಲು ತೆಪ್ಪವಿರಬೇಕು, ಸಂಸಾರ ಸಾಗರ ದಾಟಲು ತೆಪ್ಪಗಿರಬೇಕು..' ಈ ಮಾತುಗಳು ಅಕ್ಷರಶಃ ಸತ್ಯ.

-ವಿ.ಜಿ.ಎನ್. ಶಿವಮೊಗ್ಗ

## ಚಿತ್ತಾಕರ್ಷಕ

ಸುಂದರ ಮುಖಪುಟ ಹೊತ್ತು ಬಂದ ಸುಧಾ ಯುಗಾದಿ ವಿಶೇಷಾಂಕ ಸಂಚಿಕೆ ಚಿತ್ತಾಕರ್ಷಕವಾಗಿ ಮೂಡಿಬಂದಿದೆ. ಕೆ.ಟಿ. ಗಟ್ಟಿ ಅವರ ವ್ಯಕ್ತಿತ್ವ ವಿಕಸನ ಲೇಖ, ಶೈಲಜ/ವೇಣುಗೋಪಾಲ್ ಅವರ 'ನಮ್ಮ ಕನ್ನಡ ಹೇಗಿರಬೇಕು?' ಮತ್ತು ಡಾ. ಮೀನಾಕ್ಷಿ ಬಾಳಿ ಅವರ 'ಅರಿವಿಂಗೆ ಬೇರೊಂದು ಒಡಲು ಉಂಟೆ?' ಲೇಖನ ಬಹಳ ಇಷ್ಟವಾಯಿತು.

-ಪುಟ್ಟಗೌರಿ ಚಿದಾನಂದ, ಕಲಬುರಗಿ

## ಮೆಚ್ಚುಗೆಯಾದ ಪ್ರಬಂಧ

ವಿಶೇಷಾಂಕದಲ್ಲಿ ಬಹುಮಾನ ಪಡೆದ ಶೈಲಾ ರಾಘವೇಂದ್ರ ಅವರ 'ಶಾಲೇಲಿ ಕನ್ನಡ ಕಲಿಸಿಲ್ಲೇನ್'? ಪ್ರಬಂಧ ಬಹಳ ಮೆಚ್ಚುಗೆಯಾಯಿತು. ರಾಮನಾಥ್ ಅವರ 'ಡೊಳ್ಳು ಪುರಾಣ' ನಗಿಸಿತು. ನಗೆಹೊನಲು ಕಚಗುಳಿ ಕೊಟ್ಟಿತು.

-ಪ್ರದೀಪ್ ಎನ್. ಚೆಲುವರಸನಕೊಪ್ಪಲು